ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಶ್ರೀ.ಶಾಂತೇಶ್ವರ ವಿದ್ಯಾವರ್ಧಕ ಸಂಘದ ವ್ಯಾಪ್ತಿಗೊಳಪಡುವ ಜಿ.ಆರ್.ಜಿ ಕಲಾ & ವೈ.ಎ.ಪಿ ವಾಣಿಜ್ಯ ಕಾಲೇಜು, ಇಂಡಿ ಇಲ್ಲಿ ಖಾಲಿ ಇರುವ 10 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ:

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿ:03.10.81 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲ ಕಾಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು.
2) ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್ಇ/2009, ದಿ:24.12.2009.
3) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014 ದಿ:01.09.2017.
4) ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:01.03.2018.
5) ಈ ಕಛೇರಿಯ ಸೇರ್ಪಡೆ ಆದೇಶ ಸಂಖ್ಯೆ:ಕಾಶಿಇ/173/ಖಾಹುಭ/2017-18/ನೇವಿ-2 ದಿನಾಂಕ:19.03.2018.
6) ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರ ಪತ್ರ ಸಂಖ್ಯೆ:ಕಾಶಿಇ/ಪ್ರಾಕಧಾ/75/ಖಾಹುಭ/ಜಿಇಎಸ್-7/2017-18/1093 ದಿನಾಂಕ:17.10.2018.
7) ಜಿಲ್ಲಾ ಪೋಲೀಸ್ ಅಧೀಕ್ಷಕರುಗಳ ವಿವಿಧ ದಿನಾಂಕಗಳ ಪತ್ರಗಳು.
8) ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ವಿವಿಧ ದಿನಾಂಕಗಳ ಪತ್ರಗಳು.
9) ವಿವಿಧ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ಬಂದಿರುವ ಪತ್ರಗಳು
10) ಈ ಕಛೇರಿಯ ಸಮಸಂಖ್ಯೆಯ ಪತ್ರ ದಿನಾಂಕ:30.03.2019.
11) ಸರ್ಕಾರದ ಪತ್ರ ಸಂಖ್ಯೆ:ಇಡಿ/128/ಯುಪಿಸಿ/2019 ದಿ:27.05.2019.

** ** **

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಮಂಜೂರಾದ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಉಲ್ಲೇಖ (3)ರ ಸರ್ಕಾರದ ಆದೇಶದನ್ವಯ, ಈ ಕಛೇರಿಯ ಉಲ್ಲೇಖ (4)ರ ಪತ್ರದಲ್ಲಿ ಶ್ರೀ.ಶಾಂತೇಶ್ವರ ವಿದ್ಯಾವರ್ಧಕ ಸಂಘದ ವ್ಯಾಪ್ತಿಗೊಳಪಡುವ ಜಿ.ಆರ್.ಜಿ ಕಲಾ & ವೈ.ಎ.ಪಿ ವಾಣಿಜ್ಯ ಕಾಲೇಜು, ಇಂಡಿ ಇಲ್ಲಿ ಖಾಲಿ ಇರುವ 09 ಸಹಾಯಕ ಪ್ರಾಧ್ಯಾಪಕರು & 01 ಗ್ರಂಥಪಾಲಕರ ಹುದ್ದೆಗಳನ್ನು ಭರ್ತಿ ಮಾಡಲು ಜಾಹಿರಾತು ನೀಡಿ, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ಆಯ್ಕೆ ಸಮಿತಿ ಮೂಲಕ ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ತಿಳಿಸಲಾಗಿತ್ತು. ಅದರಂತೆ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ಮಂಡಳಿ ದಿನಪತ್ರಿಕೆಗಳಲ್ಲಿ ಜಾಹಿರಾತುಪಡಿಸಿ, ಉಲ್ಲೇಖ (2)ರ ಸರ್ಕಾರದ ಆದೇಶದನ್ವಯ, ಆಯ್ಕೆ ಸಮಿತಿ ರಚಿಸಿ, ಅರ್ಹ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ 09 ಸಹಾಯಕ ಪ್ರಾಧ್ಯಾಪಕರ ಮತ್ತು 01 ಗ್ರಂಥಪಾಲಕರ ಹುದ್ದೆಗಳಿಗೆ ಆಡಳಿತ ಮಂಡಳಿಯು ಆಯ್ಕೆ ಸಮಿತಿ ಮುಖಾಂತರ ಆಯ್ಕೆ ಮಾಡಿಕೊಂಡಿರುವ ಅರ್ಹ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ ಉಲ್ಲೇಖ (6)ರ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಸದರಿ ಖಾಲಿ ಹುದ್ದೆಗಳಿಗೆ ಆಯ್ಕೆ ಸಮಿತಿ ಮೂಲಕ ಆಯ್ಕೆ ಹೊಂದಿರುವ ಅಭ್ಯರ್ಥಿಗಳು ನಿಯಮಾನುಸಾರ ನಿಗದಿತ ವಯೋಮಿತಿ ಹಾಗೂ ವಿದ್ಯಾರ್ಹತೆ ಹೊಂದಿದ್ದು, ಇವರ ವಿರುದ್ಧ ಯಾವುದೇ ವಿಧವಾದ ವ್ಯತಿರಿಕ್ತ ವರದಿಗಳು ವರದಿಯಾಗಿರುವುದಿಲ್ಲವೆಂದು ಉಲ್ಲೇಖ (7)ರಲ್ಲಿ ಸಂಬಂಧಪಟ್ಟ ಪೋಲೀಸ್ ಅಧೀಕ್ಷಕರು/ಆಯುಕ್ತರು ವರದಿ ನೀಡಿರುತ್ತಾರೆ. ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ಉಲ್ಲೇಖ (8)ರಲ್ಲಿ ಸಂಬಂಧಪಟ್ಟ ಸಮಾಜ ಕಲ್ಯಾಣಾಧಿಕಾರಿಗಳು ನೀಡಿರುತ್ತಾರೆ. ಸದರಿ ಅಭ್ಯರ್ಥಿಗಳು ಪಡೆದಿರುವ ಸ್ನಾತಕೋತ್ತರ, ಪಿಹೆಚ್.ಡಿ ಪದವಿಯ ಮತ್ತು ಕೆಎಸ್ಇಟಿ ಪ್ರಮಾಣ ಪತ್ರಗಳ ನೈಜತೆಯ ಬಗ್ಗೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಂದ ನೈಜತೆಯ ಪ್ರಮಾಣ ಪತ್ರಗಳನ್ನು ಉಲ್ಲೇಖ (9)ರಲ್ಲಿ ಪಡೆಯಲಾಗಿದೆ. ಹಾಗೂ ಎನ್ಇಟಿ ಪ್ರಮಾಣ ಪತ್ರದ ನೈಜತೆಯನ್ನು ಆನ್‌ಲೈನ್ ಮುಖಾಂತರ ಪರಿಶೀಲಿಸಲಾಗಿದೆ. ಉಲ್ಲೇಖ (10)ರ ಈ ಕಛೇರಿಯ ಸಮ ಸಂಖ್ಯೆಯ ಪತ್ರದಲ್ಲಿ ಆಡಳಿತ ಮಂಡಳಿ 09 ಸಹಾಯಕ ಪ್ರಾಧ್ಯಾಪಕರ ಮತ್ತು 01 ಗ್ರಂಥಪಾಲಕರ ಹುದ್ದೆಗಳಿಗೆ ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದ ಅನುಮತಿ ಕೋರಲಾಗಿತ್ತು. ಅದರಂತೆ, ಉಲ್ಲೇಖ (11)ರ ಸರ್ಕಾರದ ಪತ್ರದಲ್ಲಿ ಸದರಿ ಅಭ್ಯರ್ಥಿಗಳ ನೇಮಕಾತಿಯನ್ನು

ನಂ:362
ದಿ: 01 JUL 2019

ಅನುಮೋದಿಸಲು ಸರ್ಕಾರವು ಅನುಮತಿ ನೀಡಿರುತ್ತದೆ. ಆದ್ದರಿಂದ ಸದರಿ 10 ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸಲು, ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ/180/ಖಾಹುಭ/2017-18/ಧಾವಿ/ನೇವಿ-2, ಬೆಂಗಳೂರು, ದಿನಾಂಕ:21.06.2019**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಶ್ರೀ.ಶಾಂತೇಶ್ವರ ವಿದ್ಯಾವರ್ಧಕ ಸಂಘದ ವ್ಯಾಪ್ತಿಗೊಳಪಡುವ ಜಿ.ಆರ್.ಜಿ ಕಲಾ & ವೈ.ಎ.ಪಿ ವಾಣಿಜ್ಯ ಕಾಲೇಜು, ಇಂಡಿ ಇಲ್ಲಿ ಖಾಲಿ ಇರುವ 09 ಸಹಾಯಕ ಪ್ರಾಧ್ಯಾಪಕರು ಹಾಗೂ 01 ಗ್ರಂಥಪಾಲಕರ ಹುದ್ದೆಗಳಿಗೆ ಆಡಳಿತ ಮಂಡಳಿ ಆಯ್ಕೆ ಸಮಿತಿಯ ಮೂಲಕ ಆಯ್ಕೆ ಮಾಡಿರುವ ಈ ಕೆಳಕಂಡ ಅಭ್ಯರ್ಥಿಗಳ ನೇಮಕಾತಿಯನ್ನು ಅವರ ಹೆಸರಿನ ಮುಂದೆ ತಿಳಿಸಿರುವ ವೇತನ ಶ್ರೇಣಿಯಲ್ಲಿ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಮೋದಿಸಲಾಗಿದೆ.

| ಕ್ರ. ಸಂ | ಅಭ್ಯರ್ಥಿಯ ಹೆಸರು & ಪದನಾಮ ಶ್ರೀ/ಶ್ರೀಮತಿ | ಜನ್ಮ ದಿನಾಂಕ | ವಿದ್ಯಾರ್ಹತೆ | ವೇತನ ಶ್ರೇಣಿ | ವರ್ಗ | ಷರಾ |
|---|---|---|---|---|---|---|
| 1 | 2 | 3 | 5 | 6 | 7 | 4 |
| 1 | ಶ್ರೀಶೈಲ<br>ಕನ್ನಡ<br>ಸಹಾಯಕ ಪ್ರಾಧ್ಯಾಪಕರು | 01.6.1983 | ಎಂ.ಎ-<br>78.3%<br>ಎನ್.ಇ.ಟಿ | 15600-39100<br>+6000 ಎಜಿಪಿ | ಸಾ.ಅ | ಡಾ.ಎಸ್.ಕೆ.ಕೊಪ್ಪಾ<br>ಇವರ ನಿವೃತ್ತಿಯಿಂದ<br>ದಿ:28.02.2014 ರಂದು<br>ತೆರವಾದ ಹುದ್ದೆಗೆದುರಾಗಿ |
| 2 | ಶಾಂತಪ್ಪ ಜಾಧವ<br>ಕನ್ನಡ<br>ಸಹಾಯಕ ಪ್ರಾಧ್ಯಾಪಕರು | 01.06.1979 | ಎಂ.ಎ-<br>61%<br>ಎನ್.ಇ.ಟಿ | 15600-39100<br>+6000 ಎಜಿಪಿ | ಪ.ಜಾ | ಶ್ರೀ.ಎಸ್.ಆರ್.ಲೋಣಿ<br>ಇವರ ಸ್ವಇಚ್ಛಾ<br>ನಿವೃತ್ತಿಯಿಂದ<br>ದಿ:31.03.2007 ರಂದು<br>ತೆರವಾದ ಹುದ್ದೆಗೆದುರಾಗಿ |
| 3 | ಶ್ರೀಕಾಂತ್ ರಾಥೋಡ್<br>ಹಿಂದಿ<br>ಸಹಾಯಕ ಪ್ರಾಧ್ಯಾಪಕರು | 15.06.1987 | ಎಂ.ಎ-<br>63.3%<br>ಕೆಎಸ್ಇಟಿ | 15600-39100<br>+6000 ಎಜಿಪಿ | ಸಾ.ಅ | ಶ್ರೀ.ಎನ್.ಬಿ.ಪಾಟೀಲ<br>ಇವರ ನಿವೃತ್ತಿಯಿಂದ<br>ದಿ:31.05.2012 ರಂದು<br>ತೆರವಾದ ಹುದ್ದೆಗೆದುರಾಗಿ |
| 4 | ಚಂದ್ರಪ್ಪಗೌಡ ಬಿರಾದಾರ್<br>ಆಂಗ್ಲಭಾಷೆ<br>ಸಹಾಯಕ ಪ್ರಾಧ್ಯಾಪಕರು | 10.04.1984 | ಎಂ.ಎ-<br>56.7%<br>ಪಿಹೆಚ್‌ಡಿ | 15600-39100<br>+6000 ಎಜಿಪಿ | ಏಕವ್ಯಕ್ತಿ ವಿಭಾಗ<br>ಮೀಸಲಾತಿ<br>ಅನ್ವಯಿಸುವುದಿಲ್ಲ | ಶ್ರೀ.ಎನ್.ವಿ.ಹಂಜಗಿ<br>ಇವರ ನಿವೃತ್ತಿಯಿಂದ<br>ದಿ:30.09.2013 ರಂದು<br>ತೆರವಾದ ಹುದ್ದೆಗೆದುರಾಗಿ |
| 5 | ವಿಶ್ವಾಸ ಕೋರವಾರ<br>ಇತಿಹಾಸ<br>ಸಹಾಯಕ ಪ್ರಾಧ್ಯಾಪಕರು | 16.04.1975 | ಎಂ.ಎ-<br>59.25%<br>ಪಿಹೆಚ್‌ಡಿ | 15600-39100<br>+6000 ಎಜಿಪಿ | ಪ.ಜಾ | ಶ್ರೀ.ವಿ.ಎಂ.ಬಿರಾದಾರ<br>ಇವರ ನಿವೃತ್ತಿಯಿಂದ<br>ದಿ:31.05.2012 ರಂದು<br>ತೆರವಾದ ಹುದ್ದೆಗೆದುರಾಗಿ |
| 6 | ಪ್ರಕಾಶ್ ರಾಥೋಡ್<br>ಅರ್ಥಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | 01.06.1978 | ಎಂ.ಎ-<br>55.62%<br>ಪಿಹೆಚ್.ಡಿ | 15600-39100<br>+6000 ಎಜಿಪಿ | ಪ.ಜಾ | ಶ್ರೀ.ಎಸ್.ಡಿ.ಬೆಳಕಿಂಡಿ<br>ಇವರ ನಿವೃತ್ತಿಯಿಂದ<br>ದಿ:30.06.2015 ರಂದು<br>ತೆರವಾದ ಹುದ್ದೆಗೆದುರಾಗಿ |
| 7 | ಸುರೇಂದ್ರ.ಕೆ<br>ಸಮಾಜಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | 29.08.1978 | ಎಂ.ಎ-<br>68.8%<br>ಪಿಹೆಚ್.ಡಿ<br>ಎನ್.ಇ.ಟಿ | 15600-39100<br>+6000 ಎಜಿಪಿ | ಪ.ಜಾ | ಶ್ರೀ.ಶರಣಪ್ಪ ಬಿರಾದಾರ<br>ಇವರ ನಿವೃತ್ತಿಯಿಂದ<br>ದಿ:31.05.2013 ರಂದು<br>ತೆರವಾದ ಹುದ್ದೆಗೆದುರಾಗಿ |
| 8 | ಮಲ್ಲಿಕಾರ್ಜುನ್ ಕೋಣದೆ<br>ವಾಣಿಜ್ಯಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | 04.06.1993 | ಎಂ.ಕಾಂ-<br>63.5%<br>ಎನ್.ಇ.ಟಿ | 15600-39100<br>+6000 ಎಜಿಪಿ | ಸಾ.ಅ | ಶ್ರೀ.ಸಿ.ಬಿ.ಬಿರಾದಾರ<br>ಇವರ ನಿವೃತ್ತಿಯಿಂದ<br>ದಿ:31.10.2015 ರಂದು<br>ತೆರವಾದ ಹುದ್ದೆಗೆದುರಾಗಿ |
| 9 | ಜಯಪ್ರಸಾದ್ ಡಿ<br>ವಾಣಿಜ್ಯಶಾಸ್ತ್ರ<br>ಸಹಾಯಕ ಪ್ರಾಧ್ಯಾಪಕರು | 16.10.1986 | ಎಂ.ಕಾಂ-<br>64.2%<br>ಪಿಹೆಚ್.ಡಿ<br>ಎನ್.ಇ.ಟಿ | 15600-39100<br>+6000 ಎಜಿಪಿ | ಪ.ಜಾ | ಶ್ರೀ.ಎಸ್.ಎನ್.ಹಿರೇಮಠ<br>ಇವರ ನಿಧನದಿಂದ<br>ದಿ:13.11.2008 ರಂದು<br>ತೆರವಾದ ಹುದ್ದೆಗೆದುರಾಗಿ |
| 10 | ರಾಘವೇಂದ್ರ ಇಂಗನಾಳ್<br>ಗ್ರಂಥಪಾಲಕರು | 15.07.1984 | ಎಂ.ಲಿಬ್-<br>67.47%<br>ಕೆಎಸ್ಇಟಿ | 15600-39100<br>+6000 ಎಜಿಪಿ | ಏಕವ್ಯಕ್ತಿ ವಿಭಾಗ<br>ಮೀಸಲಾತಿ<br>ಅನ್ವಯಿಸುವುದಿಲ್ಲ | ಶ್ರೀ.ಬಿ.ಸಿ.ಪಾಟೀಲ<br>ಇವರ ನಿವೃತ್ತಿಯಿಂದ<br>ದಿ:30.04.2015 ರಂದು<br>ತೆರವಾದ ಹುದ್ದೆಗೆದುರಾಗಿ |

ಷರತ್ತುಗಳು:-

1) ಸರ್ಕಾರಿ ಆದೇಶ ಸಂಖ್ಯೆ: ಇಡಿ/146/ಯುಪಿಸಿ/79, ದಿನಾಂಕ:03.10.81 ಮತ್ತು ಈ ನಿಟ್ಟಿನಲ್ಲಿ ಆಗಿಂದಾಗ್ಗೆ ಹೊರಡಿಸಿರುವ ಮತ್ತು ಹೊರಡಿಸುವ ತಿದ್ದುಪಡಿ ಹಾಗೂ ಸ್ಪಷ್ಟೀಕರಣ ಅನುಗುಣವಾಗಿ ನಿಗದಿಪಡಿಸಿದ ಕಾರ್ಯಭಾರವನ್ನು ಹೊಂದಿರತಕ್ಕದ್ದು. ಅಲ್ಲದೆ ಮುಂದೆ ಸರ್ಕಾರ ವಿಧಿಸಬಹುದಾದ ಷರತ್ತುಗಳಿಗೆ ಈ ನೇಮಕಾತಿ ಒಳಪಟ್ಟಿರುತ್ತದೆ.

2) ಕಾಲೇಜು ವೇತನಾನುದಾನಕ್ಕೆ ಒಳಪಟ್ಟ ಸಂದರ್ಭದಲ್ಲಿ ಆಡಳಿತ ಮಂಡಳಿ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಗಳಂತೆ ಹಾಗೂ ಪ್ರಚಲಿತ ಇರುವ ಎಲ್ಲಾ ಸರ್ಕಾರಿ ನಿಯಮಗಳನ್ನು ಪಾಲಿಸತಕ್ಕದ್ದು.

3) ಸದರಿ ಅಭ್ಯರ್ಥಿಗಳ ನೇಮಕಾತಿಯು ಈ ಆದೇಶದ ದಿನಾಂಕದ ನಂತರ ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಜಾರಿಗೆ ಬರುತ್ತದೆ ಹಾಗೂ ಯಾವುದೇ ಹಿಂದಿನ ವೇತನ ಬಾಕಿಗೆ ಅರ್ಹತೆ ಹೊಂದಿರುವುದಿಲ್ಲ.

4) ಸದರಿಯವರ ನೇಮಕಾತಿಯ ಸೇವಾ ವಿವರಗಳು ಕಾಲೇಜಿನ ಸ್ಥಳೀಯ ಲೆಕ್ಕ ಪತ್ರ ತನಿಖಾ ಸಮಯದಲ್ಲಿ ಪರಿಶೀಲನೆಗೆ ಒಳಪಟ್ಟಿರುತ್ತದೆ. ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾಲೇಜಿಗೆ ನೀಡುತ್ತಿರುವ ಅನುದಾನವನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಕಾಲೇಜು ಶಿಕ್ಷಣ ಆಯುಕ್ತರಿಗೆ ಕಾಯ್ದಿರಿಸಿದೆ.

5) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು, ಆಗಿಂದಾಗ್ಗೆ ಈ ಸಂಬಂಧ ವಿಧಿಸುವ ಸೇವಾ ಷರತ್ತುಗಳಿಗೆ ಒಳಪಟ್ಟಿರುತ್ತದೆ.

6) ಮೇಲ್ಕಂಡ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳು 06 ತಿಂಗಳೊಳಗಾಗಿ ಅಂಗೀಕೃತ ಸಂಸ್ಥೆಗಳಲ್ಲಿ ಕನ್ನಡ/ಆಂಗ್ಲಭಾಷೆಯಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು ಹಾಗೂ ತೇರ್ಗಡೆಯಾದ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸತಕ್ಕದ್ದು.

7) ಮೇಲ್ಕಂಡ ಅಭ್ಯರ್ಥಿಗಳಿಗೆ ಅವರು ಕೆಲಸಕ್ಕೆ ಹಾಜರಾದ ನಂತರ ಸರ್ಕಾರಿ ಆದೇಶ ಸಂಖ್ಯೆ: FD(Spl) 04/PET/2005 ದಿನಾಂಕ:31-03-2006ರನ್ವಯ ಹೊಸ ವಂತಿಕೆ ಪಿಂಚಣಿ ಯೋಜನೆ ಅನ್ವಯಿಸುವುದು. ಸದರಿ ಆದೇಶದ ಕಂಡಿಕೆ (8)ರಲ್ಲಿ ತಿಳಿಸಿರುವಂತೆ ದಿನಾಂಕ:01.04.2006ರ ನಂತರ ಸೇವೆಗೆ ಸೇರುವ/ಅನುದಾನಕ್ಕೊಳಪಡುವ ಸಿಬ್ಬಂದಿಗಳಿಗೆ ಹಿಂದಿನ ವ್ಯಾಖ್ಯಾನಿಸಿದ ಪಿಂಚಣಿ ಯೋಜನೆ (The Defined Benefit Pension Scheme) ಅನ್ವಯಿಸುವುದಿಲ್ಲ. ಹೊಸ ಪಿಂಚಣಿ ಯೋಜನೆಯು ಅವರಿಗೆ ಐಚ್ಛಿಕವಾಗಿ ಅನ್ವಯಿಸುತ್ತಿದ್ದು, ಆಡಳಿತ ಮಂಡಳಿ & ಸಿಬ್ಬಂದಿ ಇಬ್ಬರೂ ಒಪ್ಪಿರತಕ್ಕದ್ದೆಂದೂ ಆದರೆ ನೇಮಕಾತಿ ಪ್ರಾಧಿಕಾರದ ವಂತಿಕೆಯನ್ನು ಆಯಾ ಕಾಲೇಜುಗಳ ಆಡಳಿತ ಮಂಡಳಿಗಳು ಭರಿಸಬೇಕೆಂದು ಹಾಗೂ ಸರ್ಕಾರವು ವಂತಿಕೆಯನ್ನು ಭರಿಸುವುದಿಲ್ಲವೆಂದೂ ಈ ಮೂಲಕ ತಿಳಿಸಲಾಗಿದೆ.

8) ಮೇಲೆ ತಿಳಿಸಿರುವ ಅಭ್ಯರ್ಥಿಗಳ ನೇಮಕಾತಿಗೆ ಸಂಬಂಧಿಸಿದಂತೆ ನೀಡಿರುವ ಮಾಹಿತಿ ಹಾಗೂ ದಾಖಲಾತಿಗಳು ತಪ್ಪೆಂದು ಕಂಡು ಬಂದಲ್ಲಿ ಸದರಿ ನೇಮಕಾತಿ ಆದೇಶವನ್ನು ಕೂಡಲೇ ರದ್ದುಪಡಿಸಲಾಗುವುದು.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ-ಇವರ ಮಾಹಿತಿಗಾಗಿ ಮತ್ತು ವಾರ್ಷಿಕ ವೇತನ ಪಟ್ಟಿಗೆ ಅನುಮೋದನೆ ನೀಡುವಾಗ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿಗೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕೆಂಬ ಸೂಚನೆಯೊಂದಿಗೆ ಹಾಗೂ ಸುಳ್ಳು ದಾಖಲಾತಿಗಳಿದ್ದಲ್ಲಿ ಸದರಿ ಅನುಮೋದನೆ ರದ್ದುಗೊಳಿಸಲು ಪ್ರಸ್ತಾವನೆಗಳನ್ನು ಈ ಕಛೇರಿಗೆ ಕಳುಹಿಸುವ ಷರತ್ತಿಗೊಳಪಟ್ಟಿರುತ್ತದೆ.
2) ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ.ಶಾಂತೇಶ್ವರ ವಿದ್ಯಾವರ್ಧಕ ಸಂಘ, ಇಂಡಿ, ವಿಜಯಪುರ ಜಿಲ್ಲೆ
3) ಪ್ರಾಂಶುಪಾಲರು, ಜಿ.ಆರ್.ಜಿ ಕಲಾ & ವೈ.ಎ.ಪಿ ವಾಣಿಜ್ಯ ಕಾಲೇಜು, ಇಂಡಿ, ವಿಜಯಪುರ ಜಿಲ್ಲೆ

**ಪ್ರತಿ ರವಾನೆ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು -ಮಾಹಿತಿಗಾಗಿ.
2) ಲೆಕ್ಕಾಧಿಕಾರಿಗಳು, ಆಯವ್ಯಯ ವಿಭಾಗ, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಮಾಹಿತಿಗಾಗಿ.
3) ಹೆಚ್ಚುವರಿ ಪ್ರತಿ.
4) ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ.

ಸಂಖ್ಯೆ: ಕಾಶಿಇ/ಪ್ರಾಶಿಧಾ/ಖಾಪ್ರನೇ/ಜಿಇವಿಜಿ-7/2017-18

ದಿನಾಂಕ: 02/07/2019

ಮಾನ್ಯ ಆಯುಕ್ತರ ಸದರಿ ಆದೇಶದ ಷರತ್ತುಗಳನುಸಾರ ಸಹಾಯಕ ಪ್ರಾಧ್ಯಾ-ಪಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಂಡು ವೇತನ ನಿಗದೀಕರಣಕ್ಕೆ ನಿಯಮಾನುಸಾರ ತಃಖ್ತೆ ಮತ್ತು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ

ಇವರಿಗೆ,
DCE-180 GRG
ಪ್ರಾಂಶುಪಾಲರು, ಜಿ.ಆರ್.ಜಿ. ಕಲಾ ಮತ್ತು ವೈ.ಎ.ಪಿ. ವಾಣಿಜ್ಯ ಕಾಲೇಜು,

Shri Shanteshwar Vidyavardhak Sangha's
SHRI GULABACHAND RAVAJI GANDHI ARTS,
SHRI YASHAVANTARAY ANNARAY PATIL COMMERCE AND
SHRI MANIKCHAND PHULACHAND DOSHI SCIENCE DEGREE COLLEGE,
INDI-586209. DIST: VIJAYAPUR. (KARNATAKA)
Affiliated to Rani Channamma University, Belagavi.
Re-Accredited by NAAC with 'B' Grade In 3rd Cycle.
Gmail: pplgrgindi@gmail.com Web: www.grgyapmfdc.org
Phone: 08359-225118
College Code-5225
UUCMS-
A03GML0324

Ref: Date:

This is to certify that the following faculties are appointed by the management as full time lecturers during the academic year 2021-22

| Sl. No. | Name of the Candidates | Teaching Subject |
|---|---|---|
| 1 | Miss S.S.Patil | Computer |
| 2 | Smt. Sweta Kant | Biology |
| 3 | Miss P.Kulakarni | Mathematics |
| 4 | Smt S.B. Patil | Physics |
| 5 | Shri Balaram Vaddar | English |
| 6 | Smt. B. Kannolli | Comp. Science |
| 7 | Shri R.G.Pujari | Commerce |
| 8 | Shri. P Ajmani | Chemistry |
| 9 | Miss Shruti Biradar | Physics |
| 10 | Smt. Nashrin Walikar | Kannada |
| 11 | Shri. R. Balaganur | P. Director |
| 12 | Shri. A Wagmare | English |

Principal

IQAC Co-ordinator,
Shri Shanteshwar Vidyavardhak Sangha,
Shri Gulabachand Ravaji Gandhi Arts,
Shri Yashavantaray Annaray Patil Commerce
and Shri Manikachand Phulachand Doshi
Science Degree College,
INDI-586209. Dist: Vijayapur.

SSVVS
INDI
586209
College Code:
5225
Shri G.R.G.Arts,Shri Y.A.P.Commerce & M.P.D.Science Degree College

Principal
Shri Shanteshwar Vidyavardhak Sangha,
Shri Gulabachand Ravaji Gandhi Arts,
Shri Yashavantaray Annaray Patil Commerce
and Shri Manikachand Phulachand Doshi
Science Degree College,
INDI-586209. Dist: Vijayapur.